## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಪಿ. ಹೆಚ್. ಪೂಜಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 124 |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 05-12-2023. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮದ ಅಡಿಯಲ್ಲಿ ನೊಂದಾಯಿತ ನೇಕಾರರ ಸಂಖ್ಯೆ ಎಷ್ಟು; | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ 9000 ನೋಂದಾಯಿತ ನೇಕಾರರಿದ್ದು ಇದರಲ್ಲಿ 3850 ನೇಕಾರರು ಮಾತ್ರ ಕಾರ್ಯ ನಿರತರಾಗಿರುತ್ತಾರೆ. |
| (ಆ) | ನಿಗಮದ ನೇಕಾರರಿಗೆ ಸಮಯಕ್ಕೆ ಸರಿಯಾಗಿ ಕಚ್ಚಾನೂಲು ಹಾಗೂ ಮಜೂರಿ (ಸಂಬಳ) ವಿತರಣೆಯಾಗದೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಇ) | ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ಸಂಪೂರ್ಣ ಮಾಹಿತಿಯೊಂದಿಗೆ ವಿವರ ನೀಡುವುದು) | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ 2023-24ನೇ ಸಾಲಿನಲ್ಲಿ ವಿದ್ಯಾವಿಕಾಸ ಯೋಜನೆಯಡಿ ಸಮವಸ್ತ್ರ ಬಟ್ಟೆ ಸರಬರಾಜು ಮಾಡಿದ ಮೊತ್ತ ರೂ.14.48 ಕೋಟಿ ಶಿಕ್ಷಣ ಇಲಾಖೆಯಿಂದ ಬಿಡುಗಡೆಗೆ ಬಾಕಿ ಇರುವ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಹಾಗೂ 2024-25ನೇ ಸಾಲಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಸಮವಸ್ತ್ರ ಬಟ್ಟೆ ಸರಬರಾಜು ಮಾಡುವಂತೆ ಶಿಕ್ಷಣ ಇಲಾಖೆಯಿಂದ ಸರಬರಾಜು ಆದೇಶ ನೀಡುವ ಕುರಿತು ಜರುಗಿದ ಸಚಿವ ಸಂಪುಟ ತೀರ್ಮಾನದನ್ವಯ ದಿನಾಂಕ: 30.09.2023 ರಂದು ಸರ್ಕಾರದ ಆದೇಶ ಹೊರಡಿಸಲಾಗಿರುತ್ತದೆ.<br><br>ಮುಂದುವರೆದು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿಗೆ ಕಲಬುರ್ಗಿ ವಿಭಾಗದ 07 ಜಿಲ್ಲೆಗಳ 6 ಮತ್ತು 7ನೇ ತರಗತಿಯ ಎಲ್ಲಾ ಗಂಡು & ಹೆಣ್ಣು ಮಕ್ಕಳಿಗೆ ಸಮವಸ್ತ್ರ ಬಟ್ಟೆ ಸರಬರಾಜು ಮಾಡುವ ಪ್ರಮಾಣವನ್ನು ನಿಯಮಾನುಸಾರ ನಿಗದಿಪಡಿಸುವಂತೆ ಹಾಗೂ |

| | | |
|---|---|---|
| | | ನಿಗಮದ ನೇಕಾರರಿಂದಲೇ ಉತ್ಪಾದಿಸಿದ ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡುವಂತೆ ಖಾತರಿಪಡಿಸಿಕೊಂಡು ನಿಗಮಕ್ಕೆ ಷರತ್ತು ವಿಧಿಸಿ ಶಾಲಾ ಶಿಕ್ಷಣ & ಸಾಕ್ಷರತಾ ಇಲಾಖೆಯಿಂದ ದಿನಾಂಕ:28-11-2023 ರಂದು ಸರ್ಕಾರದ ಆದೇಶ ಹೊರಡಿಸಲಾಗಿರುತ್ತದೆ.<br><br>ನಿಗಮವು ಆರ್ಥಿಕ ಸಂಕಷ್ಟದಲ್ಲಿದ್ದರೂ ಸಹ ನೇಕಾರರಿಗೆ ನಿರಂತರ ಉದ್ಯೋಗ ನೀಡುವ ಉದ್ದೇಶದಿಂದ ಕಚ್ಚಾಮಾಲು ಮತ್ತು ಮಜೂರಿಯನ್ನು ವಿತರಿಸಲಾಗಿರುತ್ತದೆ. ಪ್ರಸಕ್ತ ಸಾಲಿನ ಏಪ್ರಿಲ್ 2023 ರಿಂದ ನವೆಂಬರ್ 2023 ರ ವರೆಗೆ ನಿಗಮದಿಂದ ನೇಕಾರರಿಗೆ ವಿತರಿಸಿದ ಕಚ್ಚಾನೂಲು ಹಾಗೂ ಮಜೂರಿ ಪಾವತಿಸಿದ ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ. |

**ಸಂಖ್ಯೆ: CI 132 JAKE 2023**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

## ಅನುಬಂಧ

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ. ಪಿ. ಹೆಚ್.ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 124 : ಮಾಹಿತಿಗಳ ವಿವರ**

**ಹತ್ತಿ ಮತ್ತು ರೇಷ್ಮೆ ಯೋಜನೆಗಳಲ್ಲಿ ಉತ್ಪಾದನಾ / ಕಚ್ಚಾ ನೂಲು ಮತ್ತು ಪರಿವರ್ತನಾ ದರ/ಮಜೂರಿಗಳ ವಿತರಣೆಯ ವರದಿ ಎಪ್ರಿಲ್-2023 ರಿಂದ ನವೆಂಬರ್-2023 (24.11.2023ರ ಅಂತ್ಯಕ್ಕೆ)**

| ಕ್ರಮ ಸಂಖ್ಯೆ | ಹತ್ತಿ ಯೋಜನೆಯ ಹೆಸರು | ಉತ್ಪಾದನೆ | | ನೇಕಾರರಿಗೆ ಪಾವತಿಸಿದ ಪರಿವರ್ತನಾ ದರ/ಮಜೂರಿ (ರೂ.ಲಕ್ಷಗಳಲ್ಲಿ) | ನೇಕಾರರಿಗೆ ವಿತರಿಸಿದ ನೂಲು | |
|---|---|---|---|---|---|---|
| | | ಪ್ರಮಾಣ ಮೀಟರ್‌ಗಳಲ್ಲಿ | ಮೊತ್ತ (ರೂ.ಲಕ್ಷಗಳಲ್ಲಿ) | | ಪ್ರಮಾಣ (ಕೆ.ಜಿ.ಲಕ್ಷಗಳಲ್ಲಿ) | ಮೊತ್ತ (ರೂ.ಲಕ್ಷಗಳಲ್ಲಿ) |
| 1 | ಬನಹಟ್ಟಿ | 358010 | 303.45 | 109.75 | 0.49 | 198.29 |
| 2 | ರಬಕವಿ | 284341 | 254.03 | 88.48 | 0.41 | 166.41 |
| 3 | ರಾಮದುರ್ಗ | 230913 | 196.38 | 70.47 | 0.31 | 122.87 |
| 4 | ಇಲಕಲ್ | 247768 | 213.28 | 76.2 | 0.33 | 138.66 |
| 5 | ರಾಣೆಬೆನ್ನೂರ | 149467 | 119.71 | 44.35 | 0.19 | 77.16 |
| 6 | ಕಲಬುರ್ಗಿ | 220159 | 165.77 | 69.25 | 0.24 | 101.18 |
| 7 | ಬಸವಕಲ್ಯಾಣ | 96246 | 74.31 | 30.89 | 0.13 | 46.64 |
| 8 | ಗದಗ-ಬೆಟಗೇರಿ | 177671 | 175.47 | 64.69 | 0.28 | 109.24 |
| 10 | ಮಂಗಳೂರು | 2512 | 4.34 | 3.19 | 0.01 | 1.42 |
| | ಒಟ್ಟು | 1767087 | 1506.74 | 557.27 | 2.39 | 961.87 |

| ಕ್ರಮ ಸಂಖ್ಯೆ | ರೇಷ್ಮೆ ಯೋಜನೆಯ ಹೆಸರು | ಉತ್ಪಾದನೆ | | ನೇಕಾರರಿಗೆ ಪಾವತಿಸಿದ ಪರಿವರ್ತನಾ ದರ/ಮಜೂರಿ (ರೂ.ಲಕ್ಷಗಳಲ್ಲಿ) | ನೇಕಾರರಿಗೆ ವಿತರಿಸಿದ ನೂಲು | |
|---|---|---|---|---|---|---|
| | | ಪ್ರಮಾಣ ಮೀಟರ್‌ಗಳಲ್ಲಿ | ಮೊತ್ತ (ರೂ.ಲಕ್ಷಗಳಲ್ಲಿ) | | ಪ್ರಮಾಣ (ಕೆ.ಜಿ. ಲಕ್ಷಗಳಲ್ಲಿ) | ಮೊತ್ತ (ರೂ.ಲಕ್ಷಗಳಲ್ಲಿ) |
| 1 | ಆನೇಕಲ್/ಚಿಂತಾಮಣಿ | 6671.60 | 63.57 | 20.37 | 676.794 | 42.34 |
| 2 | ತಿಪಟೂರು/ಕಲ್ಲೂರು | 2282.50 | 9.90 | 2.10 | 177.520 | 13.37 |
| 3 | ಕೊಳ್ಳೆಗಾಲ | 3246.25 | 21.75 | 4.19 | 237.630 | 17.14 |
| 4 | ಮೊಳಕಾಲ್ಮೂರು/ ವೈಎನ್.ಹೊಸಕೋಟೆ | 4405.30 | 50.36 | 16.63 | 526.025 | 33.39 |
| | ಒಟ್ಟು | 16605.65 | 145.58 | 43.29 | 1617.969 | 106.24 |

ಜಂಟಿ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ